# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 767 |
| ಸದಸ್ಯರ ಹೆಸರು | : ಶ್ರೀಮತಿ ಹೇಮಲತಾ ನಾಯಕ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 21.08.2026 |
| ಉತ್ತರಿಸುವ ಸಚಿವರು | : ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆಳವಂಡಿ – ಬೆಟಗೇರಿ ಏತ ನೀರಾವರಿ ಯೋಜನೆಯನ್ನು ಯಾವ ವರ್ಷದಲ್ಲಿ ಘೋಷಿಸಲಾಗಿದೆ; ಸದರಿ ಯೋಜನೆಗೆ ಒಟ್ಟು ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ಹಾಗೂ ಇದುವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಮತ್ತು ಎಷ್ಟು ಅನುದಾನ ಖರ್ಚು ಮಾಡಲಾಗಿದೆ; (ವರ್ಷವಾರು ವಿವರ ಒದಗಿಸುವುದು) | ಆಳವಂಡಿ-ಬೆಟಗೇರಿ ಏತ ನೀರಾವರಿ ಯೋಜನೆಯ ರೂ.87.10 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ದಿನಾಂಕ:30.12.2014ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>ಈ ಯೋಜನೆಗೆ ಇದೂವರೆಗೆ ರೂ.100.22 ಕೋಟಿ ಅನುದಾನ ಮೀಸಲಿಡಲಾಗಿದ್ದು, ರೂ.82.427 ಕೋಟಿ ವೆಚ್ಚ ಮಾಡಲಾಗಿದೆ. ವರ್ಷವಾರು ವೆಚ್ಚದ ವಿವರಗಳನ್ನು ಕೆಳಗಿನಂತಿದೆ.<br>(ರೂ. ಕೋಟಿಗಳಲ್ಲಿ) |

| ವರ್ಷ | ಅನುದಾನ | ವೆಚ್ಚ | ವರ್ಷ | ಅನುದಾನ | ವೆಚ್ಚ |
|---|---|---|---|---|---|
| 2016-17 | 20.00 | 14.275 | 2022-23 | 4.15 | 7.053 |
| 2017-18 | 15.00 | 31.709 | 2023-24 | 3.35 | 0.081 |
| 2018-19 | 20.00 | 11.188 | 2024-25 | 0.23 | 0.09 |
| 2019-20 | 14.69 | 16.614 | 2025-26 | 4.00 | 0.002 |
| 2020-21 | 5.00 | 0 | 2026-27 | 1.00 | 0 |
| 2021-22 | 12.80 | 1.415 | | | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಆಳವಂಡಿ-ಬೆಟಗೇರಿ ಏತ ನೀರಾವರಿ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳು ಯಾವುವು; ಕಾಮಗಾರಿವಾರು ನಿಗದಿಪಡಿಸಿರುವ ಅಂದಾಜು ವೆಚ್ಚ ಕಾಮಗಾರಿಯ ಪ್ರಸ್ತುತ ಸ್ಥಿತಿ ಹಾಗೂ ಇದುವರೆಗೆ ಖರ್ಚಾಗಿರುವ ಮೊತ್ತ ಎಷ್ಟು; (ವಿವರ ಒದಗಿಸುವುದು) | ಆಳವಂಡಿ-ಬೆಟಗೇರಿ ಯೋಜನೆಯಡಿಯಲ್ಲಿನ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:<br>1. 6000 ಎಕರೆಗೆ ನೀರೊದಗಿಸುವ ರೂ.19.74 ಕೋಟಿ ಅಂದಾಜು ಮೊತ್ತದ ಕಾಲುವೆ ಮತ್ತು ಉಪ-ಕಾಲುವೆ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>2. 6000 ಎಕರೆಗೆ ನೀರೊದಗಿಸುವ ಜಾಕ್‌ವೇಲ್, ರೈಸಿಂಗ್ ಮೇನ್, ಡೆಲಿವರಿ ಚೆಂಬರ್‌ಗೆ ಸಂಬಂಧಿಸಿದ ಎಲ್ಲಾ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಲೈನ್ ಚಾರ್ಜ್ ಮಾಡಲು Pre-commissioning test ಬಾಕಿ ಉಳಿದಿರುತ್ತದೆ. ಗುತ್ತಿಗೆ ಮೊತ್ತ ರೂ.62.91 ಕೋಟಿಗಳಲ್ಲಿ ಇಲ್ಲಿಯವರೆಗೆ ರೂ.52.90 ಕೋಟಿ ವೆಚ್ಚವಾಗಿರುತ್ತದೆ.<br>3. ಹೆಚ್ಚುವರಿ 3000 ಎಕರೆಗೆ ನೀರೊದಗಿಸಲು ರೂ.4.42 ಕೋಟಿ ಮೊತ್ತದ ರೈಸಿಂಗ್ ಮೇನ್, ಡೆಲಿವರಿ ಚೇಂಬರ್ ಕಾಮಗಾರಿ ಪ್ರಗತಿಯಲ್ಲಿದ್ದು, ಇದುವರೆಗೂ ಒಟ್ಟು ರೂ.2.22 ಕೋಟಿ ವೆಚ್ಚವಾಗಿರುತ್ತದೆ.<br>4. ಹೆಚ್ಚುವರಿ 3000 ಎಕರೆಗೆ ನೀರೊದಗಿಸಲು ರೂ.11.48 ಕೋಟಿ ಮೊತ್ತದ ಪೈಪ್ ನೆಟ್‌ವರ್ಕ್ ಕಾಮಗಾರಿ ಪ್ರಗತಿಯಲ್ಲಿದ್ದು, ಮಾರ್ಚ್-2027ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.<br>ಹೊಲಗಾಲುವೆಗಳ ಕಾಮಗಾರಿಗಳು ಬಾಕಿ ಇದ್ದು, ಈ ಯೋಜನೆಯ ರೂ.211.00 ಕೋಟಿಗಳ ಪರಿಷ್ಕೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) | ಸದರಿ ಯೋಜನೆಯಡಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಕಾಮಗಾರಿಗಳು ಬಾಕಿ ಉಳಿದಿವೆ; ಪ್ರಸ್ತುತ ಯೋಜನೆಯ ಮೂಲಕ ರೈತರ ಜಮೀನುಗಳಿಗೆ ನೀರು ಹರಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಗ್ರಾಮಗಳ ಎಷ್ಟು ಎಕರೆ ಜಮೀನಿಗೆ ನೀರು ಪೂರೈಕೆ ಮಾಡಲಾಗುತ್ತಿದೆ; (ವಿವರ ನೀಡುವುದು) | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಸದರಿ ಯೋಜನೆಯ ಕಾಮಗಾರಿಗಳು ವಿಳಂಬವಾಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು; ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಿ ನಿಗದಿತ ಅಚ್ಚುಕಟ್ಟು ಪ್ರದೇಶದ ರೈತರ ಜಮೀನುಗಳಿಗೆ ನೀರು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಯೋಜನೆಯನ್ನು ಪೂರ್ಣಗೊಳಿಸಿ ರೈತರ ಹೊಲಗಳಿಗೆ ನೀರು ಹರಿಸಲು ಸರ್ಕಾರ ನಿಗದಿತ ಕಾಲಮಿತಿ (Time Line) ಯನ್ನು ನಿಗದಿಪಡಿಸಿದೆಯೇ? ಹೌದಾದಲ್ಲಿ ಅದರ ವಿವರವನ್ನು ಒದಗಿಸುವುದು). | ಮೂಲ ಯೋಜನೆಯನ್ವಯ 6000 ಎಕರೆಗೆ ನೀರಾವರಿ ಕಲ್ಪಿಸಲು ಯೋಜಿಸಿದ್ದು, ಬೆಟಗೇರಿ ಗ್ರಾಮದ ರೈತರು ಸದರಿ ಗ್ರಾಮಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ರೈಸಿಂಗ್‌ಮೇನ್ ಪೈಪ್‌ಲೈನ್ ಹಾಗೂ ವಿದ್ಯುತ್ ಸಂಪರ್ಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಂತೆ ಅಡ್ಡಿಪಡಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಮತ್ತು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕಾಮಗಾರಿಗಳು ವಿಳಂಬವಾಗಿರುತ್ತದೆ. ರೈತರ ಮನವೊಲಿಸಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದ್ದು, pre-commissioning ಪ್ರಕ್ರಿಯೆ ಹಂತದಲ್ಲಿರುತ್ತದೆ. ಹೊಲಗಾಲುವೆ ಕಾಮಗಾರಿಗಳ ಅನುಷ್ಠಾನದ ನಂತರ ರೈತರ ಹೊಲಗಳಿಗೆ ನೀರನ್ನು ಹರಿಸಲಾಗುತ್ತದೆ. |

ಜಸಂಇ 96 ಎಂಎಲ್‌ಎ 2026

(ಎನ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು